ಪಿಲಿಕುಳ ಅಭಿವೃದ್ಧಿ ಪ್ರಾಧಿಕಾರ, ಮಂಗಳೂರು

## ಪಿಲಿಕುಳ ಪ್ರಾದೇಶಿಕ ವಿಜ್ಞಾನ ಕೇಂದ್ರ

# ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ – 2023




ದಿನಾಂಕ 08.03.2023ರಂದು ಪಿಲಿಕುಳ ಪ್ರಾದೇಶಿಕ ವಿಜ್ಞಾನ ಕೇಂದ್ರದಲ್ಲಿ **'ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ'**ಯ ಕಾರ್ಯಕ್ರಮವನ್ನು ಧರ್ಮಜ್ಯೋತಿ ಸಮಾಜ ಸೇವಾ ಕೇಂದ್ರ ಮತ್ತು ಸೌಹಾರ್ದ ಮಹಿಳಾ ಒಕ್ಕೂಟ, ವಾಮಂಜೂರು ಇವರ ಸಹಕಾರದೊಂದಿಗೆ ಆಯೋಜಿಸಲಾಯಿತು. ಕಾರ್ಯಕ್ರಮದ ಉದ್ಘಾಟನೆಯನ್ನು ಧರ್ಮಜ್ಯೋತಿ ಚಾರಿಟೇಬಲ್ ಸೊಸೈಟಿಯ, ಅಧ್ಯಕ್ಷೆ, ಸಿಸ್ಟರ್ ಲೀನಾ ವಳ್ಳೂಕರನ್ ಜೋಸ್, ಇವರು ನೆರವೇರಿಸಿ ಮಾತನಾಡುತ್ತಾ ಮಹಿಳೆಯರು ತಮ್ಮ ಸಾಮರ್ಥ್ಯಗಳನ್ನು ಅರಿತುಕೊಂಡು ಸಕಾರಾತ್ಮಕ ಚಿಂತನೆಗಳಿಂದ ಉನ್ನತ ಸಾಧನೆಗಳನ್ನು ಮಾಡಲು ಸಾಧ್ಯ ಅಂತಹ ಪ್ರಯತ್ನಗಳನ್ನು ಮಾಡಲು ನಾವು ಶ್ರಮವಹಿಸಬೇಕೆಂದು ಕರೆಯಿತ್ತರು. ಸಿಸ್ಟರ್ ಜೊಯೆಲ್ ಲಸ್ರಾದೋ, ನಿರ್ದೇಶಕಿ, ಧರ್ಮಜ್ಯೋತಿ ಸಮಾಜ ಸೇವಾ ಕೇಂದ್ರ ಇವರು ಸ್ವಾಗತಿಸಿ ಪ್ರಸ್ತಾವನೆಗೈದರು. ಈ ಬಾರಿಯ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆಯ ಕೇಂದ್ರ ವಿಷಯ 'ಎಲ್ಲರಿಗೆ ಡಿಜಿಟಲ್: ಲಿಂಗ ಸಮಾನತೆಗಾಗಿ ನಾವಿನ್ಯತೆಯ ಅನ್ವೇಷಣೆ ಮತ್ತು ತಂತ್ರಜ್ಞಾನ' ಇದಕ್ಕೆ ಅನುಗುಣವಾಗಿ ಪ್ರಸಕ್ತ ಕಾಲಘಟ್ಟದ ಡಿಜಿಟಲ್ ತಂತ್ರಜ್ಞಾನವನ್ನು ನಾವು ಅರಿತುಕೊಂಡು ಸಮಾಜದ ಸ್ವಾಸ್ಥ್ಯಕ್ಕಾಗಿ ಕಾರ್ಯಪ್ರವೃತ್ತರಾಗಬೇಕೆಂದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದ ಡಾ. ಕೆ ವಿ ರಾವ್, ಮಹಿಳೆಯರು ತಮ್ಮ ದೈನಂದಿನ ಜೀವನ ಉತ್ತಮವಾಗಿ ನಡೆಸಲು ವೇಗವಾಗಿ ಬೆಳೆಯುತ್ತಿರುವ ತಂತ್ರಜ್ಞಾನ ಬಗ್ಗೆ ಆಳವಾಗಿ ತಿಳಿದುಕೊಂಡು ತಮ್ಮ ಕುಟುಂಬ ಮತ್ತು ಸಾಮಾಜಿಕ ಬೆಳವಣಿಗೆಗಳಿಗೆ ಅವುಗಳನ್ನು ಅನುಸರಿಸಬೇಕೆಂದರು. ಸಾಮಾಜಿಕ ಕಾರ್ಯಕರ್ತೆ ಶ್ರೀಮತಿ ಲಿನಿಟಾ ಲೂಯಿಸ್, ವಂದನಾರ್ಪಣೆಗೈದರು. ಶ್ರೀ ಜಗನ್ನಾಥ್, ಕಾರ್ಯಕ್ರಮ ನಿರ್ವಹಿಸಿದರು.



ನಂತರ ನಡೆದ ಉಪನ್ಯಾಸ ಕಾರ್ಯಕ್ರಮದಲ್ಲಿ ಸಂತ ಜೋಸೇಫ್ ಇಂಜಿನಿಯರಿಂಗ್ ಕಾಲೇಜಿನ ಕಂಪ್ಯೂಟರ್ ವಿಭಾಗದ ಮುಖ್ಯಸ್ಥೆ, ಪ್ರಾಧ್ಯಾಪಕಿ ಡಾ. ಶ್ರೀದೇವಿ ಸರಳಾಯ ಡಿಜಿಟಲ್ ತಂತ್ರಜ್ಞಾನದ ಮುನ್ನುಡಿಯೊಂದಿಗೆ ಊಹಿಸಲಾಗದ ಸಾಮಾಜಿಕ ಬದಲಾವಣೆಗಳು ಕಂಡುಬಂದಿವೆ. ಇವುಗಳ ಒಳಿತು ಕೆಡುಕುಗಳನ್ನು ಅವಶ್ಯವಾಗಿ ತಿಳಿದುಕೊಳ್ಳಬೇಕೆಂದು ಉದಾಹರಣೆಗಳೊಂದಿಗೆ ವಿವರಿಸಿದರು. ಉದ್ಯೋಗಸ್ಥ ಮಹಿಳೆಯಾಗಲು ಬೇಕಾದ ವಾತಾವರಣವನ್ನು ರೂಪಿಸಲು ತಂತ್ರಜ್ಞಾನದ ಬಳಕೆ ಬೇಕು. ಆದರೆ ಯುವ ಜನಾಂಗವನ್ನು ಸರಿಯಾದ ದಾರಿಯಲ್ಲಿ ಮುನ್ನಡೆಸಲು ಮಹಿಳೆಯರು ಅಗತ್ಯ ಕ್ರಮಗಳನ್ನು ಕೈಗೊಳ್ಳುವ ಸಂದರ್ಭಗಳು ಎದುರಾಗಬಹುದೆಂದರು.

ಸೌಹಾರ್ದ ಮಹಿಳಾ ಒಕ್ಕೂಟದ ಮಹಿಳೆಯರಿಂದ ಸಾಂಸ್ಕೃತಿಕ ಚಟುವಟಿಕೆಗಳು ನಡೆದವು.


ಅಂತಾರಾಷ್ಟ್ರೀಯ
ಪಿಲಿಕುಳ
PILIKULA
www.pilikula.com

